ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.ರವರ ನ್ಯಾಯಾಲಯ, ತರೀಕೆರೆ.

## ಕ್ರಿಮಿನಲ್ ಮೊಕದ್ದಮೆ ಸಂಖ್ಯೆ 68/2019

ಪಿರ್ಯಾದಿ ಃ ರಾಜ್ಯದ ಪರವಾಗಿ ಲಿಂಗದಹಳ್ಳಿ ಪೊಲೀಸರು

- ವಿರುದ್ಧ -

ಆರೋಪಿ/ತರುಃ

1) ಮೋಸೀನ್ ಬಿನ್ ಕೈಸರ್ ಖಾನ್, 28 ವರ್ಷ, ಚಾಲಕ ವೃತ್ತಿ, ವಾಸ ಃ ಅನ್ವರ್ ಕಾಲೋನಿ, 5ನೇ ಕ್ರಾಸ್, ಹಫೀಜಾ ಮಸೀದಿ ಹತ್ತಿರ, ಭದ್ರಾವತಿ ಟೌನ್, ಶಿವಮೊಗ್ಗ ಜಿಲ್ಲೆ

2) ಜಬಿ ಯಾನೆ ಜಬಿವುಲ್ಲಾ ಬಿನ್ ಪ್ಯಾರುಸಾಬ್, 38 ವರ್ಷ, ಕೂಲಿ ಕೆಲಸ, ವಾಸ ಃ ದಡಮಘಟ್ಟ, ಭದ್ರಾವತಿ ತಾಲ್ಲೂಕು, ಶಿವಮೊಗ್ಗ ಜಿಲ್ಲೆ

3) ನಸ್ರು ಯಾನೆ ನಸ್ರುಲ್ಲಾ ಬಿನ್ ಅಮ್ಜದ್, 26 ವರ್ಷ, ಕೂಲಿ ಕೆಲಸ, ವಾಸ ಃ ಶಾಹಿನಗರ, ನೂರಾನಿ ಮಸೀದಿ ಹತ್ತಿರ, ದಡಮಘಟ್ಟ, ಭದ್ರಾವತಿ ತಾಲ್ಲೂಕು, ಶಿವಮೊಗ್ಗ ಜಿಲ್ಲೆ

4) ರಮೇಶ ಬಿನ್ ನರಸಿಂಹಯ್ಯ, 34 ವರ್ಷ, ಕೂಲಿ ಕೆಲಸ, ವಾಸ ಃ ದಡಮಘಟ್ಟ, ಭದ್ರಾವತಿ ತಾಲ್ಲೂಕು, ಶಿವಮೊಗ್ಗ ಜಿಲ್ಲೆ

5) ಯಾಸೀನ್ ಬಿನ್ ಕೈಸರ್ ಖಾನ್, 27 ವರ್ಷ, ಕೂಲಿ ವೃತ್ತಿ, ವಾಸ ಃ 5ನೇ ಕ್ರಾಸ್, ಅನ್ವರ್ ಕಾಲೋನಿ, ಹಫೀಜಾ ಮಸೀದಿ ಹತ್ತಿರ, ಭದ್ರಾವತಿ ಟೌನ್, ಶಿವಮೊಗ್ಗ ಜಿಲ್ಲೆ

6) ಅತೀಕ್ ಯಾನೆ ಮಹಮದ್ ಅತೀಕ್ ಬಿನ್ ಮಹಮದ್ ಹಯಾತ್, 31 ವರ್ಷ, ಅಡಿಕೆ ವ್ಯಾಪಾರ, ವಾಸ ಃ ಅರಳಿಹಳ್ಳಿ ಗ್ರಾಮ, ಭದ್ರಾವತಿ ತಾಲ್ಲೂಕು, ಶಿವಮೊಗ್ಗ ಜಿಲ್ಲೆ

****

**-ಃದೋಷಾರೋಪಣೆಃ-**

ಶ್ರೀಮತಿ ಉರ್ಮಿಳ.ವಿ ಬಿ.ಎ.ಎಲ್., ಎಲ್.ಎಲ್.ಬಿ., ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ., ತರೀಕೆರೆ ಆದ ನಾನು ಆರೋಪಿತರಾದ ನಿಮ್ಮ ವಿರುದ್ಧ ಮಾಡುವ ದೋಷಾರೋಪಣೆ ಏನೆಂದರೆಃ-

ದಿನಾಂಕ 13.10.2017 ರಂದು ಲಿಂಗದಹಳ್ಳಿ ಪೊಲೀಸ್ ಠಾಣಾ ಸರಹದ್ದಿನ ಕೆಂಚಾಪುರ ಗೇಟ್ ನಿವಾಸಿಯಾದ ಚಾಸಾ-1 ಜಿ.ಜಿ.ಸಿದ್ದಪ್ಪರವರು ತಮ್ಮ ಮನೆಯ ಹಿಂಭಾಗದ ಕಣದಲ್ಲಿ ಬೇಯಿಸಿದ ಅಡಿಕೆಯನ್ನು ಟಾರ್ಪಲ್ ನಲ್ಲಿ ಒಣ ಹಾಕಿದ್ದು, ಸಂಜೆ ಅಡಿಕೆಯನ್ನು ಟಾರ್ಪಲ್ ನಿಂದ ಮುಚ್ಚಿದ್ದು, ಅದೇ ದಿನ ರಾತ್ರಿ ಸಮಯದಲ್ಲಿ 1 ರಿಂದ 5 ನೇ ಆರೋಪಿತರಾದ ನೀವು ಕೆಎಃ20/ಬಿ-1748 ರ ಬೊಲೆರೋ ಪಿಕಪ್ ವಾಹನದಲ್ಲಿ ಬಂದು ಸ್ಟಿಕ್ಕರ್ ಕಟರ್ ನಿಂದ ಟಾರ್ಪಲ್ ನ್ನು ಕಟ್ ಮಾಡಿ ರೂ.2,06,400/- ಬೆಲೆಯ ತಲಾ 60 ಕೆ.ಜಿ. ತೂಕದ 8 ಚೀಲ ಕೆಂಪಡಿಕೆ ಮತ್ತು ತಲಾ 40 ಕೆ.ಜಿ. ತೂಕದ 5 ಚೀಲ ಸಿಪ್ಪೆಗೋಟನ್ನು ಕಳವು ಮಾಡಿದ್ದು, ಆದಕಾರಣ 1 ರಿಂದ 5 ನೇ ಆರೋಪಿತರಾದ ನೀವು ಭಾರತೀಯ ದಂಡ ಸಂಹಿತೆ ಕಲಂ 379 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಮಾಡಿರುವಿರಿ.

ಎರಡನೇಯದಾಗಿ ಅದೇ ದಿನ, ಅದೇ ಸಮಯ ಹಾಗೂ ಅದೇ ಸ್ಥಳದಲ್ಲಿ 6 ನೇ ಆರೋಪಿಯಾದ ನೀವು ಅಡಿಕೆ ಕಳವು ಮಾಲು ಎಂದು ತಿಳಿದೂ ಕೂಡ ಕಳವು ಮಾಲನ್ನು 1 ರಿಂದ 5 ನೇ ಆರೋಪಿತರಾದ ನಿಮ್ಮಿಂದ ಖರೀದಿಸಿದ್ದು, ಆದಕಾರಣ 6 ನೇ ಆರೋಪಿಯಾದ ನೀವು ಭಾರತೀಯ ದಂಡ ಸಂಹಿತೆ ಕಲಂ 114 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಮಾಡಿರುವಿರಿ.

ನೀವು ಸದರಿ ಆರೋಪಗಳ ಮೇಲೆ ಈ ನ್ಯಾಯಾಲಯದಿಂದ ವಿಚಾರಣೆಗೆ ಗುರಿಯಾಗತಕ್ಕದೆಂದು ನಾನು ಈ ಮೂಲಕ ನಿರ್ದೇಶಿಸುತ್ತೇನೆ.

ದಿನಾಂಕ ಃ 17.02.2024

ಸಹಿ
**(ಉರ್ಮಿಳ.ವಿ)**
ಸಿವಿಲ್ ನ್ಯಾಯಾಧೀಶರು ಮತ್ತು
ಹೆಚ್ಚುವರಿ ಪ್ರ.ದ.ನ್ಯಾ.ದಂ., ತರೀಕೆರೆ.